Regd No. M 1299 SATYAVADI Founded 1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬಂತಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 31 ಸಂಚಿಕೆ 29] ಶುಕ್ರವಾರ 31–10–47 [ಬಿಡಿ ಪ್ರತಿ 3½ ಪೈ

ಮುಸ್ಲಿಂ ಸಂಸ್ಥೆ ನೇರ ಕಾರ್ಯಾಚರಣೆ ಹೂಡುವುದೇ ?

ಹೈದರಾಬಾದು ಅ 28.... ಔರಂಗಾಬಾದಿನಲ್ಲಿ 15 ಸಾವಿರ ಮುಸ್ಲಿಮರು ಮೆರವಣಿಗೆ ಮಾಡಿ ಹೈದರಾಬಾದು ಸ್ವತಂತ್ರವಾಗಿಂಬೇಕೆಂದು, ಡೊಮಿನಿಯನ್ನಿಗೆ ಸೇರಿದರೆ ನೇರ ಕಾರ್ಯಾಚರಣೆಯನ್ನು ಕೈಗೊಳ್ಳುವುದಾಗಿ ತಿಳಿಸಿದರು.

ರಷಿಯನ್ನರು ೧೫ ದಿವಸಗಳಲ್ಲಿ ದೆಹಲಿ ತಲಪುವರು

ಲಂಡನ್ ಅ 28.... ಏಮಾಸ ನಾಯುಕ ಹಾರ್ವೆ ಈ ದಿವಸ ಕಾವನ್ಸು ಸಭೆಯಲ್ಲಿ ಭಾಷಣ ಮಾಡುತ್ತಾ, ಪಾಕಿಸ್ತಾನದಲ್ಲಿ ಗೂಂಡಾರಾಜ್ಯವೇ ಇಸ್ತಾನವೆದರೆ, ರಷ್ಯಾ ಇನ್ನು 15 ದಿನಗಳಲ್ಲಿ ದೆಹಲಿ ತಲಪುವದ ಎಂದು ಜಿಸ್ತರು ಹೇಳಿದರೆಂದು ತಿಳಿಸಿದರು.

ವಜ್ರ ವಾಪಸು ಮಾಡಿ

ಲಂಡನ್ ಅ 28— ನಾಜಿಗಳು ಲೂಟಿ ಮಾಡಿದ್ದ ವಜ್ರಗಳನ್ನು ವಾಪಸ್ಸು ಮಾಡಬೇಕೆಂದು ಪೋಲೆಂಡು ಕೇಳಿದೆ.

ಹೋಟೆಲು ಮಾಲೀಕರಿಗೆ ಎಚ್ಚರಿಕೆ

ಮಧುರಾ— ಉಪಹಾರ ಗೃಹಗಳ ಕೆಲಸಗಾರರು ಬೇಡಿಕೆಗಳನ್ನು ಈಡೇರಿಸದಿದ್ದಲ್ಲಿ ಮುಷ್ಕರ ಹೂಡುವುದಾಗಿ ಮಾಲೀಕರ ಸಂಘಕ್ಕೆ ಪ್ರಕಟಣೆ ಇತ್ತಿದಾರೆ

ಭಾರತದ ದೊಂಬಿಗಳಿಗೆ ಜವಾಬ್ದಾರ ನಾನಲ್ಲ —

ಹೀಗೆಂದು ಅಲ್ಲಿ ಪ್ರಧಾನಿಯರು ಕಾಸುನ್ಸು ಸಭೆಯಲ್ಲಿ ತಿಳಿಸಿದರು..

ಕಾಲೇಜು ವಾರ್ಷಿಕೋತ್ಸವ

ಮಂತ್ರಾಲಯ ಅ 29

ಜಗದ್ಗುರು ಶ್ರೀ ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠದ ಶ್ರೀ ಮುಕ್ತಾನಂದೀಂದ್ರ ತೀರ್ಥಶ್ರೀಗಳವರ ಮಾನ್ಯ ನೇತೃತ್ವದಲ್ಲಿ ಶ್ರೀ ಗುರು ಸಾರ್ವಭೌಮ ಸಂಸ್ಕೃತ ಕಾಲೇಜಿನ ವಾರ್ಷಿಕೋತ್ಸವವು ವಿಜೃಂಭಣೆಯಿಂದ ನಡೆಯಿತು. ತಾ॥ 24 ರಲ್ಲಿ ವಾರ್ಷಿಕ ವರದಿಯನ್ನು ಕಾಲೇಜಿನ ಪ್ರಿನ್ಸಿಪಾಲರು ಶ್ರೀಗಳವರಲ್ಲಿ ಓದಿ ಅರ್ಪಿಸಿದರು. ತಾ॥ 26 ರಲ್ಲಿ ಹರಿಕಥೆ ಮತ್ತು ಸಂಸ್ಕೃತ ಭಾಷಣಗಳಾದವು. ತಾ॥ 27 ರಲ್ಲಿ ಧಾರವಾಡದ ಕನ್ನಡ ರಿಸರ್ಚ್ ಸ ಡೈರೆಕ್ಟರು ಶ್ರೀ ಪಂಚಮುಖಿಯವರ ಉಪನ್ಯಾಸವಾಯಿತು. ರಾತ್ರೆ ಕವಿಸಾರ್ವಭೌಮ ಶಿಖಾಮಣಿ ಶ್ರೀಮತ್ಸುಧೀಂದ್ರತೀರ್ಥ ಶ್ರೀಪಾದಂಗಳವರಿಂದ (ಶ್ರೀ ರಾಯರ ಗುರುಗಳು) ರಚಿತವಾದ ಸುಭದ್ರಾ ಪರಿಣಯ (ಸಂಸ್ಕೃತ) ನಾಟಕವನ್ನು ವಿದ್ಯಾರ್ಥಿಗಳು ಅಭಿನಯಿಸಿದರು. ಶ್ರೀ ರಾಜಾ ಎನ್ ಗುರು-ರಾಜಾಚಾರ್ಯ (ಅರ್ಜುನ) ಕುರುಡಿ ಸುಶೀಲೆಂದ್ರಾಚಾರ್ಯ (ಸುಭದ್ರ) ರಿಕ್ಕಿ ವೆಂಕಣ್ಣಾಚಾರ್ಯ (ವಿದೂಷಕ) ಗುಂಜಳ್ಳಿ ವಾಡೀಂದ್ರಾಚಾರ್ಯ (ಬಲರಾಮ) ಇವರುಗಳ ಅಭಿನಯವು ಅತ್ಯುತ್ತಮವಾಗಿತ್ತು. ನಾಟಕಾನಂತರ ಕಾಲೇಜು ಪ್ರಿನ್ಸಿಪಾಲರು ಉಪಸಂಹಾರ ಭಾಷಣ ಮಾಡಿದಮೇಲೆ ಕಾರ್ಯಕ್ರಮ ಮುಕ್ತಾಯವಾಯ್ತು.

ವಿಜಯೋತ್ಸವದ ಸಂತೋಷಾರ್ಥವಾಗಿ ನಾಳೆ ಸಮ್ಮ ಆಫೀಸಿಗೆ ರಜಾ. ಮ್ಯಾ.

ಸುದ್ದಿಗಳು

ಇಸ್ತಂಬೂಲ್ ಅ 28— ಪಾಕೀ ಸ್ಥಾನದಲ್ಲಿ ಕಮ್ಯುನಿಜಂ ಬೆಳವೂರ ಲಾರದೆಂದು ಫಿರೋಜಖಾ ನೂನರು ಹೇಳಿದ್ದಾರೆ.

ಲಂಡನ್ ಅ 68— ಸಾರ್ವಜನಿಕೆ ನಿಧಿಯಿಂದ ರಾಜಕುಮಾರಿ ವಿವಾಹದಲ್ಲಿ 60 ಸಾವಿರ ರೂ. ವೆಚ್ಚಮಾಡಲಾಗುವುದು.

ಮಧುರಾ— ಕಾಲರಾ ಪ್ರಯುಕ್ತ ವೈಗಾಲ್ ನದಿಯಲ್ಲಿ ಒಬ್ಬೆ ಒಗೆಯು ಕೂಡದೆಂದು ಸರ್ಕಾರಿ ಆಜ್ಞೆ ಆದ ಕ್ಕಾಗಿ ಅಗಸರ ಮುಷ್ಕರ.

ಮೈಸೂರು ರಾಜ್ಯಾಂಗ ರಚನಾ ಸಭೆಯ ಉಧ್ಯಕ್ಷ ಸ್ಥಾನವು ಪ್ರಜಾಪಕ್ಷದ ನಾಯಕರಾದ ಶ್ರೀ ಗುರುವಾರೆಡ್ಡಿಯವರಿಗೆ ದೊರೆಯಬಹುದೆಂದು ಹೇಳಲಾಗಿದೆ.

ರಾಜಕೋಟೆ ಅ 28 — ಭಾರತ ಸ್ವಾತಂತ್ರ್ಯ ಕಾನೂನಿನ ಮೇರೆ, ಡೊಮಿನಿಯನ್ನಿಗೆ ಸೇರಬಯಸುವ ರಾಜರು ಪ್ರಜೆಗಳೊಡನೆ ಪರಿತೀಲಸೆ ಮಾಡುವುದು ಅನಗತ್ಯ ವೆಂದು ಕರಾಚಿಯಲ್ಲಿರುವ ಜುನಘಢ ರಾಜರು ಧಾರಂಗರಾಜರಿಗೆ ಬರೆದಿದ್ದಾರೆ

ಪುದುಕೋಟೆ ಅ 23— ಮಹಾರಾಜರು ವಿಜಯದಶಮಿ ದಿವಸ ಬಾಣ ಪಿಡುವ ಮಹೋತ್ಸವದಲ್ಲಿ ಆ ಬಾಣ 7 ವರ್ಷದ ಬಾಲಕನಿಗೆ ತಗುಲಿ ತೀವ್ರ ಗಾಯವಾಗಿದೆ.

ಬೆಂಗಳೂರು ಅ 27— ನವೆಂಬರ್ ತಾ॥ 15 ರಲ್ಲಿ ಪಂ॥ ನೆಹರೂ ವರ್ಧಂತಿ ಆ ಸುದಿನದಲ್ಲಿ ಪ್ರಭುಗಳು ಹರಿಜನ ದೇವಾಲಯ ಪ್ರವೇಶವನ್ನು ಘೋಷಿಸಬೇಕು ಎಂದು ಕೊಗ್ಗೇವಯಿಂದ ಸಲಹೆ ಹೊರಟಿದೆ.

ಸ್ಟೇಟು ಕಾಂಗ್ರೆಸ್ಸು ಆದೇಶಾನುಸಾರ ಗದ್ವಾಲು ಸಂಸ್ಥಾನದ ಮಾಲೀಕ ಜೋಳ್ ಪೋಲೀಸುಪಟೇಲ್ ಪಟ್ವಾರಿ ಮೊದಲಾದವರು ತಮ್ಮ ಪದವಿಗಳಿಗೆ ರಾಜೀನಾಮೆ ಕೊಟ್ಟಿರುವರು.

ಮಾದರಿಯ ಮೈಸೂರು

ಮಾದರಿಯ ಮೈಸೂರಿನಲ್ಲಿ ಇದೀಗ ಮಾರಣ ಯಜ್ಞ ಕೊನೆಗೊಂಡು ಶಾಂತಿಯ ಕಿರಣಗಳು ಕಾಣಿಸಿವೆ. ಮೈಸೂರಿನ ಪ್ರಜಾ ಚಳವಳಕ್ಕೆ ಜಯ ದೊರಕಿತು. ಆ ಜಯಕ್ಕೆ ಅವರು ಅರ್ಹರು. ಅವರು ಅನುಭವಿಸಿದ ಬಣ್ಣಬವಣೆಗಳು ವ್ಯರ್ಥವಾಗಲಿಲ್ಲ. ಅವರ ಸತ್ಯಾಗ್ರಹ ಬಿಸಲ್ಗುದುರೆಯಾಗಲಿಲ್ಲ ಅವರು ಹೂಡಿದ ನ್ಯಾಯವಾದ ಚಳವಳಕ್ಕೆ ಜಯವು ದೊರಕಿತು. ಮೈಸೂರಿನ ಹೆಮ್ಮೆಯ ನಾಡು ಹಬ್ಬ ದಸರಾ ಪ್ರಾರಂಭವಾಗುವುದಕ್ಕೆ ಮೊದಲೇ ಶಾಂತಿಯ ಚಿಹ್ನೆಗಳು ಮೂಡಿದುದು ಒಳಿತಾಯಿತು. ಮೈಸೂರು ಮಹಾರಾಜರು ಸಂಸ್ಥಾನಿಕ ಕಾಂಗ್ರೆಸ್ಸಿನ ಕೇಳಿಕೆಗೆ ಪೂರ್ಣ ಬಗ್ಗಿದ್ದಾರೆ. ಮೊದಲು ಪಮ್ಮ ಮಂತ್ರಿ ಲೋಚಕರ ಸಲಹೆಗಳಿಗೆ ಸೊಪ್ಪುಹಾಕಿ ಅದಂತೆ ಪ್ರದರ್ಶಿಸಿದರೂ ಕೊನೆಗೆ ಜನತೆಯ ಮನಸ್ಸಿಗೆ ಸಂಪೂರ್ಣ ತಬೆಬಾಗಿದ್ದಾರೆ. ಜನರ ಜವಾಬ್ದಾರಿ ಸರಕಾರದಿಂದಾಗಿ ಆದರ, ಗೌರವ, ವಿಧೇಯತೆಗಳು ದ್ವಿಗುಣಿತವಾಗದಿರಲಾರವು. ಆದೂಮ್ಮೆ 'ಮಾದರಿಯ ಮೈಸೂರು' ಎಂದು ಸರ್ವತ್ರ ಸಾರಲ್ಪಟ್ಟರುವ ಮೈಸೂರು ಮತ್ತೊಮ್ಮೆ ಆ ಅನ್ವರ್ಥ ನಾಮಕ್ಕೆ ಅರ್ಹವೆನಿಸುವ ದಿಶ ದೂರದಿರಲಾಂದು ಈದೇ ರೀತಿಯು ವಿವೇಕ ಹೈದರಾಬಾದು ಕಾಶ್ಮೀರಗಳಿಗೆ ಬಂದು ದಾದರೆ ಅವುಗಳಿಗೂ ಮೋಕ್ಷ ಕಟ್ಟಿಟ್ಟದ್ದು. ಅಂತಾಗಲಿ. (ಸ)

ಪಾಕ್ ಮಾರ್ಕ್

ಪಾಕಿಸ್ತಾನ ಸರಕಾರವು ಡೊಮಿನಿಯನ್ನಿನಲ್ಲಿ ಮಾರಾಟ ಮಾಡಲು ರಫ್ತಾಗಿ ಕೊಡುವ ವಸ್ತುಗಳ ಮೇಲೆ 'ಪಾಕ್‌ಮಾರ್ಕ್' ಎಂಬ ಗುರುತನ್ನು ಇಸ್ತು ಮೇಲೆ ಉಪಯೋಗಿಸುವುದು.

ಇದು ಕೂಡದು

ಸವಡೆಹಲಿ ಅ 28— ಬೆಳಿಟ್ ಇಲ್ಲದೆ ರೈಲ್ವೆ ಪ್ರಯಾಣ ಮಾಡುವುದು ಭಾರತವನ್ನು ನಾಶ ಮಾಡುವುದೆಂದು ವಿದ್ಯಾರ್ಥಿ ಸಭೆಯಲ್ಲಿ ಗಾಂಧೀಜಿ ಸುದಿದರು.

At Opera
2nd Glorious Week
MAD-MAN
.... with —
N.S.Krishnan, T A Madurau

Edited, Printed and Published by M. S Krishna Rao at the Satyavadi Press Chamaarja Agrahar Mysore.

Woodlands
From 31–10–47
ಅಶೋಕಕುಮಾರ್
ವೀರಾ, ಪ್ಯಾರೊ, ಪಾತ್ರವಹಿಸಿರುವ
ಷಿಕಾರಿ
(ಅವೋಘ ಹಿಂದಿ ಚಿತ್ರ)
ಪ್ರತಿ ದಿನ 3 ಆಟಗಳು

Office of the Municipal Engineer
City Municipal Council
Mysore, dated 11–10–47

NOTIFICATION

Sealed tenders will be received up to 4 p.m. on 3 rd November 1947 by the Municipal Engineer for Flooring inside the Dry Cattle-Shed of Municipal Farm.

Each tender must be accompanied with a challan for having remitted Rs. 165 in the Municipal Treasury as earnest money.

For full particulars please see the detailed notification on the notice Board.

S. NARAYANASWAMY
Municipal Engineer

ಶ್ರೀ 'ಓಂ' ಗುರುತಿನ
ಅರಿಸಿದ ಪರಿಶುದ್ಧ ಕೇಸರಿ

ಈ ಶ್ರೀ ಓಂ ಗುರುತಿನ ಕೇಸರಿಯು ಗ್ಯಾರಂಟಿಯಾಗಿ ಪರಿಶುದ್ಧವಾದುದು. ಸ್ಪೇನ್ ದೇಶದಲ್ಲಿಯು ಕೇಸರಿ ಗಿಡಗಳಿಂದ ಅರಿಸಲ್ಪಟ್ಟ ಹೂಗಳಿಂದ ಕಿತ್ತಲ್ಪಟ್ಟು ಆರಿಸ ತೆಗೆಯಲ್ಪಟ್ಟಿದಾಗಿದೆ. ಇದರಲ್ಲಿ ಏನೆಂದು ಆಕ್ಷೇಪಣೀಯ ಪದಾರ್ಥವೂ ಸೇರಿಲ್ಲ ಮತ್ತು ಧಾರ್ಮಿಕವಾಗಿಯೂ ಪರಿಶುದ್ಧವಾದುದು. ದೇವಾಲಯಗಳಲ್ಲಿಯೂ ದೇವತಾ ಪೂಜೆಗೂ ಮಂತ್ರತಾಚಾರ ಸಮಾರಂಭಗಳಲ್ಲಿಯೂ ಎಲ್ಲ ಸಂತೋಷ ಮತ್ತು ಸಾಂಘಿಕ ಕೂಟಗಳಲ್ಲಿಯೂ ಉಪಯೋಗಿಸಲ್ಪಡತಕ್ಕದ್ದಾಗಿದೆ. ಎಂದು ಶಿಫಾರಸ್ ಮಾಡಲ್ಪಟ್ಟಿದೆ

ವಲ್ಲಭದಾಸ್ ತೇಜ್‌ಪಾಲ್
(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)
ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು

ವಿಜಯೋತ್ಸವವನ್ನು
ಎಲ್ಲರೂ ವೈಭವದಿಂದ
ಆಚರಿಸಿ

Woodlands
Morning Shows at 10-30
From 31—10—47 For 7 days
The Black Panther
— starring —
Frankies Thomas
Francas Robinson
Jack Mulhall
Alseean

Save the Cow
ಗೋ ವಧೆ ನಿಲ್ಲಲಿ

ಮೈಸೂರು ಸಿಟಿ ಮುನಿಸಿಪಲ್ ಆಫೀಸಿನಿಂದಾ

ಪ್ರಕಟಣೆ

ಮೈಸೂರು ನಗರದ ಕೆಲವು ಭಾಗಗಳಲ್ಲಿ ಆರೋಗ್ಯ ನಿಯಮಗಳಿಗೆ ವಿರೋಧವಾಗಿ ಮನೆಗಳ ಗೋಡೆಗಳ ಮೇಲೆ ಜನರು ಬೀಡಿಗಳನ್ನು ತಟ್ಟುತಿರುವುದು ಕಂಡುಬಂದಿದೆ. ಈ ಅಭ್ಯಾಸವನ್ನು ಕೂಡಲೇ ನಿಲ್ಲಿಸಬೇಕಾಗಿ ಕೋರಿದೆ ಹಾಗೆ ನಿಲ್ಲಿಸದಿದ್ದಲ್ಲಿ ಮುನಿಸಿಪಲ್ ಬೈಲಾ ರೀತ್ಯಾ ಕಾರ್ಯಕ್ರಮಗಳು ತೆಗೆದುಕೊಳ್ಳಲಾಗುತ್ತೆ.

ಎಸ್. ಎಸ್. ಒರಣ್ಣಯ್ಯ
ಪ್ರೆಸಿಡೆಂಟ್
ಸಿಟಿ ಮುನಿಸಿಪಲ್ ಕೌನ್ಸಿಲ್, ಮೈಸೂರು

ಮೈಸೂರು ಸಿಟಿ ಮುನಿಸಿಪಲ್ ಆಫೀಸಿನಿಂದಾ

ಪ್ರಕಟಣೆ

ಮೈಸೂರು ನಗರದ ಕೆಲವು ಭಾಗಗಳಲ್ಲಿ ಅಂಡರ್ ಗ್ರೌಂಡ್ ಡ್ರೈನೇಜು ಸೌಲಭ್ಯವಿದ್ದಾಗ್ಯೂ ಸಹ ಮಾಲೀಕರುಗಳು ತಮ್ಮ ಮನೆಯ ಫ್ಲಷಿಂಗ್ ಔಟ್ಲೆಟ್ ಕಕ್ಕಸ್ಸುಗಳು ಕಟ್ಟಿಸಿರುವುದಿಲ್ಲ ಮನೆ ಮಾಲೀಕರುಗಳು ಕೂಡ್ಲೆ ಡ್ರೈನೇಜು ಸೌಲಭ್ಯವಿರುವ ಜಾರಂಡಿಗಳಲ್ಲಿ ಫ್ಲಷಿಂಗ್ ಕಕ್ಕಸ್ಸುಗಳನ್ನು ವಗೈರೆ ಕಟ್ಟಿಸಬೇಕಾಗಿ ಕೋರಿದೆ. ತಪ್ಪಿದರೆ ಕಾನೂನು ರೀತ್ಯಾ ಸೂಕ್ತವಾದ ಕಾರ್ಯಕ್ರಮ ನಡೆಸಲಾಗುತ್ತೆ.

ಎಸ್. ಎಸ್. ಒರಣ್ಣಯ್ಯ
ಪ್ರೆಸಿಡೆಂಟ್
ಸಿಟಿ ಮುನಿಸಿಪಲ್ ಕೌನ್ಸಿಲ್, ಮೈಸೂರು

ಪ್ರಜೆಗಳು ಹೀಗಿರಬೇಕಲ್ಲವೇ

ಕಾರ್ಯಕರ್ತರ ವಿಶೇಷ ಪ್ರಭಾವದಿಂ ಫಲಿತವಾಗಿ ಗದ್ವಾಲು ಸಂಸ್ಥಾನದಲ್ಲಿ ಹನೆಜ್ಞಂದು ಗ್ರಾಮಗಳಲ್ಲಿ ಸೇಂದಿ ಕಡಿಯುವದನ್ನೇ ನಿಲ್ಲಿಸಿರುವರು. ಯಾರೂ ಕುಡಿಯುತ್ತಿಲ್ಲ. ದಿನಂಪ್ರತಿ ಗಾಡಿಗಳ ಮೇಲೆ ಬರುತ್ತಿರುವ ಸೇಂದಿಯೆಲ್ಲವೂ ವ್ಯರ್ಥವಾಗುತ್ತಿದೆ. ಮದ್ಯಪಾನದ ಎಷಯದಲ್ಲಿ ಜನರ ದೃಕ್‌ಪಥವು ಬದಲಾವಣೆಯಾದಲ್ಲಿ ದೇಶಕ್ಕೆ ಎಷ್ಟೊ ಲಾಭವಾಗುವದರಲ್ಲಿ ಸಂದೇಹವಿಲ್ಲ.